ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು –1**

**ಸಂಖ್ಯೆ:–ಸಿ1(6)ಸಾ.ವರ್ಗಾ.ದೈಶಿ[ವಿ.ಪ]ವೃಶಿ[ವಿ.ಪ]/29/2017–18** **ದಿನಾಂಕ: 13–07–2018**

**-:ಅಧಿಕೃತ ಜ್ಞಾಪನ:-**

**ವಿಷಯ:–** 2017–18ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಬಿ ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು ವೃತ್ತಿ ಶಿಕ್ಷಣ ಇವರುಗಳ ಸಾಮಾನ್ಯ ವರ್ಗಾವಣೆಯನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ.

**ಉಲ್ಲೇಖ:–**1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007 ದಿ:01.09.2007.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿ:15.10.2007.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿ:14.11.2007.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 37 ಇಟಿಆರ್ 2009 ದಿ:23.04.2011.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 11 ಶಾಸನ 2015 ದಿ:13.05.2015.
6. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 41 ಶಾಸನ 2015 ದಿ:13.08.2015.
7. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22 ಶಾಸನ 2017 ದಿ:18.04.2017.
8. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 12 ಇಟಿಆರ್ 2017 ದಿ: 29.11.2017.
9. ಸರ್ಕಾರದ ಪತ್ರ ಸಂಖ್ಯೆ:ಇಡಿ 17 ಇಟಿಆರ್ 2017 ದಿನಾಂಕ:29–12–2017.

—*****—

ಉಲ್ಲೇಖ–1ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ಜಾರಿಗೆ ಬಂದಿರುತ್ತದೆ. ಇದರ ಅನ್ವಯ ಉಲ್ಲೇಖ–2ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ನ್ನು ರೂಪಿಸಲಾಗಿದೆ. ಉಲ್ಲೇಖ–3ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ.173.ಇಟಿಆರ್.2007 ದಿನಾಂಕ: 14.11.2007ರಲ್ಲಿ ಎ, ಬಿ, ಸಿ, ವಲಯದ ವರ್ಗೀಕರಣದ ಪ್ರದೇಶ ಹಾಗೂ ವ್ಯಾಪ್ತಿಯನ್ನು ಅಧಿಸೂಚಿಸಲಾಗಿದೆ. ಉಲ್ಲೇಖ–4ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ನಿಯಮಗಳು 2011ನ್ನು ಹೊರಡಿಸಲಾಗಿದೆ. ಉಲ್ಲೇಖ (5) ಮತ್ತು (6)ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2017ನ್ನು ರೂಪಿಸಲಾಗಿದೆ.

ಮೇಲಿನ ಆದೇಶಗಳಂತೆ 2017–18ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ಇವರ ವರ್ಗಾವಣೆ ಪ್ರಕ್ರಿಯೆಯನ್ನು ನಡೆಸಲು ತೀರ್ಮಾನಿಸಲಾಗಿದೆ. ಮತ್ತು ಇದಕ್ಕೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯು ಉಲ್ಲೇಖ(7)ರಂತೆ ದೊರೆತಿರುತ್ತದೆ. ಅದರನ್ವಯ 2017–18ನೇ ಸಾಲಿನ ಸಾಮಾನ್ಯ ವರ್ಗಾವಣೆಗಳನ್ನು 18/04/2017ರ ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ಹಿನ್ನಲೆಯ ಅನುಸಾರವಾಗಿ ಸಮಗ್ರ ನಿಯಮಗಳನ್ನು ದಿನಾಂಕ:29/11/2017ರಲ್ಲಿ ಜಾರಿಗೊಳಿಸಲಾಗಿರುವುದರಿಂದ ವರ್ಗಾವಣೆ ಬಯಸುವವರು ಅರ್ಜಿಗಳನ್ನು On Line ಮೂಲಕ ಮಾತ್ರ ಸಲ್ಲಿಸಬೇಕಾಗಿರುತ್ತದೆ. ಖುದ್ದಾಗಿ ಅಥವಾ ಟಪಾಲು ಮೂಲಕ ಲಿಖಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ.

| ಕ್ರ.ಸಂ | ವಿವರ | ದಿನಾಂಕ | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| 1 | ಕೋರಿಕೆ / ಪರಸ್ಪರ ವರ್ಗಾವಣೆ ಬಯಸುವ ಗ್ರೂಪ್ ಬಿ ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು, | 13–07–2018 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |

| | | | |
|---|---|---|---|
| | ವೃತ್ತಿ ಶಿಕ್ಷಣ ವೃಂದದ ಅಧಿಕಾರಿಗಳಿಂದ ಅರ್ಜಿಗಳನ್ನು ಕರೆಯಲು ಪ್ರಕಟಣೆ. | | 4.ಉಪನಿರ್ದೇಶಕರು [ಆಡಳಿತ]<br>5.ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 2 | ವರ್ಗಾವಣೆ ಕೋರುವ ಗ್ರೂಪ್ ಬಿ ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು, ವೃತ್ತಿ ಶಿಕ್ಷಣ ವೃಂದದ ತತ್ಸಮಾನ ಗ್ರೂಪ್–ಬಿ ವೃಂದದ ಅಧಿಕಾರಿಗಳು ಅಂತರ್ಜಾಲದ [online] ಮೂಲಕ ವರ್ಗಾವಣೆ ಆಧ್ಯತೆಗೆ ನಿಗಧಿಪಡಿಸಿರುವ ದಾಖಲೆಗಳು/ಪ್ರಮಾಣ ಪತ್ರಗಳೊಂದಿಗೆ ಇಲಾಖೆ ನಿಗಧಿ ಪಡಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸುವ ದಿನಾಂಕ. | 13–07–2018<br>ರಿಂದ<br>20–07–2018 | ಗ್ರೂಪ್ ಬಿ ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು, ವೃತ್ತಿ ಶಿಕ್ಷಣ ವೃಂದದ ಅಧಿಕಾರಿಗಳು |
| 3 | ಅರ್ಜಿ ಸಲ್ಲಿಸಿರುವ ಗ್ರೂಪ್ ಬಿ ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು, ವೃತ್ತಿ ಶಿಕ್ಷಣ ವೃಂದದ ಅಧಿಕಾರಿಗಳು ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ಕಛೇರಿಗೆ ಹಾಜರಾಗಿ ಅಗತ್ಯ ದಾಖಲೆಗಳನ್ನು ನೀಡಿ ವರ್ಗಾವಣೆ ಅರ್ಜಿ ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯಲು ನಿಗಧಿಪಡಿಸಿದ ದಿನಾಂಕ | 13–07–2018<br>ರಿಂದ<br>21–07–2018 | ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಎಲ್ಲಾ ಗ್ರೂಪ್ ಬಿ ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು, ವೃತ್ತಿ ಶಿಕ್ಷಣ ವೃಂದದ ಅಧಿಕಾರಿಗಳು ಅರ್ಜಿ ಸಲ್ಲಿಸಿದ ನಂತರ ಎರಡು ದಿನದ ಒಳಗಾಗಿ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರ ಕಛೇರಿಗೆ ದಾಖಲೆಗಳೊಂದಿಗೆ ಖುದ್ದಾಗಿ ಹಾಜರಾಗುವುದು. |
| 4 | ಉಪನಿರ್ದೇಶಕರು (ಆಡಳಿತ) / ರಾಜ್ಯ ಕಛೇರಿಗಳ ಮುಖ್ಯಸ್ಥರ ಹಂತದಲ್ಲಿ ಅಂತರ್ಜಾಲದ [on line] ಮೂಲಕ ಅರ್ಜಿಗಳನ್ನು ವರ್ಗಾವಣೆ ಆಧ್ಯತೆಗನುಗುಣವಾಗಿ ಪರಿಶೀಲಿಸಿ, ಮಾಹಿತಿ ದೃಢೀಕರಣ ಹಾಗೂ ಅರ್ಜಿ ಅನುಮೋದನೆಗೆ ನಿಗಧಿ ಪಡಿಸಿದ ದಿನಾಂಕ | 13–07–2018<br>ರಿಂದ<br>23–07–2018 | 1) ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>2)ರಾಜ್ಯ ಕೇಂದ್ರ ಕಛೇರಿಗಳ ಮುಖ್ಯಸ್ಥರು |
| 5 | ಉಪನಿರ್ದೇಶಕರು [ಆಡಳಿತ], ರಾಜ್ಯ ಕಛೇರಿಗಳ ಮುಖ್ಯಸ್ಥರವರು ಅರ್ಜಿಗಳನ್ನು ಮತ್ತು ಆದ್ಯತೆಯ ಮೂಲ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ಮುದ್ದಾಂ ಸಲ್ಲಿಸಲು ಕೊನೆಯ ದಿನಾಂಕ. | 26–07–2018 | ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>ರಾಜ್ಯ ಕೇಂದ್ರ ಕಛೇರಿಗಳ ಮುಖ್ಯಸ್ಥರು |
| 6 | ಕೋರಿಕೆ / ಪರಸ್ಪರ ವರ್ಗಾವಣೆ ಬಯಸಿರುವ ಅಧಿಕಾರಿಗಳ ತಾತ್ಕಾಲಿಕ ಪಟ್ಟಿ ಪ್ರಕಟಣೆ. ಇಲಾಖೆಯ ವೆಬ್‌ಸೈಟ್‌ನಲ್ಲಿ | 30–07–2018 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 7 | ಕೋರಿಕೆ/ಪರಸ್ಪರ ವರ್ಗಾವಣೆಗೆ ಸಂಬಂಧಿಸಿದಂತೆ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳನ್ನು ಉಪನಿರ್ದೇಶಕರು(ಆಡಳಿತ)ರವರಿಗೆ ಸಲ್ಲಿಸಲು ಕೊನೆಯ ದಿನಾಂಕ. | 30–07–2018<br>ರಿಂದ<br>04–08–2018 | ಸಂಬಂಧಿಸಿದ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು(ವೃತ್ತಿಶಿಕ್ಷಣ) ಗ್ರೂಪ್–ಬಿ ವೃಂದದ ಅಧಿಕಾರಿಗಳು |
| 8 | ಬಂದಂತಹ ಆಕ್ಷೇಪಣೆಗಳನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ)/ ರಾಜ್ಯ ಕಛೇರಿಗಳ ಮುಖ್ಯಸ್ಥರವರು ಪರಿಶೀಲಿಸಿ ಆಯಾ ಆಯುಕ್ತರಿಗೆ ಸಲ್ಲಿಸಲು ಕೊನೆಯ ದಿನಾಂಕ [ಮುದ್ದಾಂ | 07–08–2018 | 1. ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>2. ರಾಜ್ಯ ಕೇಂದ್ರ ಕಛೇರಿಗಳ ಮುಖ್ಯಸ್ಥರು |

| | | | |
|---|---|---|---|
| | ತಲುಪಿಸುವುದು]. | | |
| 9 | ಖಾಲಿ ಹುದ್ದೆಗಳ ಮಾಹಿತಿಯನ್ನು ನಿಗಧಿಪಡಿಸಿರುವ ತಂತ್ರಾಂಶದಲ್ಲಿ ಭರ್ತಿ ಮಾಡುವುದು | 09–08–2018ರ ಒಳಗಾಗಿ | 1. ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>2. ರಾಜ್ಯ ಕೇಂದ್ರ ಕಛೇರಿಗಳ ಮುಖ್ಯಸ್ಥರು |
| 9 | 1.ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ.<br>2.ಪರಸ್ಪರ ವರ್ಗಾವಣೆ ಅಂತಿಮ ಪಟ್ಟಿ ಪ್ರಕಟಣೆ.<br>3.ಖಾಲಿ ಹುದ್ದೆಗಳ ಅಂತಿಮ ಪಟ್ಟಿ ಪ್ರಕಟಣೆ ಇಲಾಖಾ ವೆಬ್‌ಸೈಟ್‌ನಲ್ಲಿ | 09–08–2018 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 10 | ಆಯಾ ಆಯುಕ್ತರ ವ್ಯಾಪ್ತಿಯೊಳಗೆ [ಘಟಕದೊಳಗೆ] ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್. | 16–08–2018 ರಿಂದ 18–08–2018 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 11 | ಆಯಾ ಆಯುಕ್ತರ ವ್ಯಾಪ್ತಿಯ ಹೊರಗಿನ [ಅಂತರ ಘಟಕ] ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ ದಿನಾಂಕ | 27–08–2018 | 1. ಆಯುಕ್ತರ ಕಛೇರಿ, ಬೆಂಗಳೂರು<br>2. ಅಪರ ಆಯುಕ್ತರ ಕಛೇರಿ, ಧಾರವಾಡ<br>3. ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 12 | ಪರಸ್ಪರ ವರ್ಗಾವಣೆ ಕೌನ್ಸಿಲಿಂಗ್‌ಗೆ ದಿನಾಂಕ (ಘಟಕದ ಒಳಗೆ ಮತ್ತು ಹೊರಗೆ) | 28–08–2018 | 1. ಆಯುಕ್ತರ ಕಛೇರಿ, ಬೆಂಗಳೂರು<br>2. ಅಪರ ಆಯುಕ್ತರ ಕಛೇರಿ, ಧಾರವಾಡ<br>3. ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |

2017–18ನೇ ಸಾಲಿನ ಆಗಸ್ಟ್/ಸೆಪ್ಟೆಂಬರ್ ಮಾಹೆಯಲ್ಲಿ ನಡೆಯುವ ಸಾಮಾನ್ಯ ವರ್ಗಾವಣೆಗೆ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಇವರುಗಳು ಅಂತರ್ಜಾಲದ **[On Line]** ಮೂಲಕ ಅರ್ಜಿಗಳನ್ನು ಸಲ್ಲಿಸುವ/ಪರಿಶೀಲಿಸುವ ವಿಧಾನವನ್ನು ಈ ಕೆಳಗಿನ ಕಂಡಿಕೆಗಳಲ್ಲಿ ನೀಡಲಾಗಿದೆ.

**ವರ್ಗಾವಣಾ ಅರ್ಜಿಗಳು:–** ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 173 ಇಟಿಆರ್ 2007 ದಿನಾಂಕ: 15.10.2007 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ರ ನಿಯಮ 6ರಂತೆ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ಇವರಿಗೆ ಸಂಬಂಧಪಟ್ಟ ವರ್ಗಾವಣೆ ಅರ್ಜಿಗಳನ್ನು [1. ಜ್ಯೇಷ್ಠತಾ ಘಟಕದ ಒಳಗೆ/ಘಟಕದ ಹೊರಗೆ. 2. ಪರಸ್ಪರ] ನಿರ್ದಿಷ್ಟ ಪಡಿಸಿರುವ ಎರಡು ಅರ್ಜಿ ನಮೂನೆಗಳನ್ನು ಇಲಾಖೆಯ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗುತ್ತದೆ.

**2017–18ನೇ ಸಾಲಿಗೆ ಅರ್ಜಿ ಸಲ್ಲಿಸುವ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ವೃಂದದವರಿಗೆ ಸೂಚನೆಗಳು:–**

1. **ಕೋರಿಕೆ ವರ್ಗಾವಣೆಗೆ On Line ನಲ್ಲಿ ಅರ್ಜಿ ಸಲ್ಲಿಸುವುದು:–** ಉಪನಿರ್ದೇಶಕರು(ಆಡಳಿತ)/ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಇವರುಗಳು ಕೋರಿಕೆ ಮೇಲೆ ವರ್ಗಾವಣೆಗೆ ಅರ್ಜಿ ಸಲ್ಲಿಸುವುದಾದಲ್ಲಿ ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗೆ OnLineನಲ್ಲಿ ಮಾತ್ರ ಅರ್ಜಿಯನ್ನು ಭರ್ತಿ ಮಾಡಬೇಕು. ಅರ್ಜಿಯನ್ನು **Schooleducation.kar.nic.in** ಇಲಾಖೆ ವೆಬ್ ಸೈಟ್‌ನಲ್ಲಿ ಹೋಗಿ **Department Software Links** ಕೆಳಗೆ ಇರುವ **Trs.Transfer 2018** ಕ್ಲಿಕ್ ಮಾಡಿ ವರ್ಗಾವಣೆ ಅರ್ಜಿಯನ್ನು ಸಲ್ಲಿಸುವುದು. ಅರ್ಜಿ ಸಲ್ಲಿಸಿದ 2 ದಿನದ ಒಳಗಾಗಿ ಸಂಬಂಧಿಸಿದ

ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ-ರವರ ಕಛೇರಿಗೆ ಸೇವಾ ಮಾಹಿತಿ ಪರಿಶೀಲನೆಗೆ ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಹಾಜರಾಗತಕ್ಕದ್ದು.

2. **<u>ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕದ ವರ್ಗಾವಣೆಗೆ On Line ನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ</u>**- ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆಗೆ ಅರ್ಜಿ ಸಲ್ಲಿಸುವವರು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಶಿಕ್ಷಕರ ವರ್ಗಾವಣೆ ನಿಯಂತ್ರಣ ಅಧಿನಿಯಮ 2007ರ ಸೆಕ್ಷನ್ 6(1)ರ ನಿಬಂಧನೆಗೆ ಒಳಪಟ್ಟು ಮತ್ತು ಸೆಕ್ಷನ್ 6(2)ರ (1) (2) (3) (4) (5)ರಲ್ಲಿನ ಹಾಗೂ ಉಲ್ಲೇಖ(5) ಮತ್ತು ಉಲ್ಲೇಖ(6)ರ ಅವಕಾಶದಂತೆ ನಿಗಧಿಪಡಿಸಿರುವ ಕೊನೆಯ ದಿನಾಂಕದ ಒಳಗೆ **On Line** ನಲ್ಲಿ ಮಾತ್ರ ಅರ್ಜಿ ಭರ್ತಿ ಮಾಡಬೇಕು ಮತ್ತು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ-ರವರ ಕಛೇರಿಗೆ ಸೇವಾ ಮಾಹಿತಿ ಪರಿಶೀಲನೆಗೆ ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಹಾಜರಾಗತಕ್ಕದ್ದು.

3. **<u>ಪರಸ್ಪರ ವರ್ಗಾವಣೆಗೆ On Line ನಲ್ಲಿ ಅರ್ಜಿ ಸಲ್ಲಿಸುವ ಕ್ರಮ ಮತ್ತು ಅರ್ಹತೆ</u>:-** ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸುವವರು ಸಹ ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗೆ **On Line** ನಲ್ಲಿ ಅರ್ಜಿ ಭರ್ತಿ ಮಾಡಬೇಕು.

[ಅ] ಖಾಯಂ ಪೂರ್ವ ಸೇವಾ ಅವಧಿಯ ಘೋಷಣೆಯಾಗಿರಬೇಕು

[ಆ] ವರ್ಗಾವಣೆ ನಿಯಮ 15ರಡಿಯಲ್ಲಿ ಬಿಡುಗಡೆಯಾದ ಅಧಿಕಾರಿಗಳು ತತ್ಸಮಾನ ವೃಂದದ ಅಧಿಕಾರಿಗಳು ಪ್ರಸ್ತುತ ಸ್ಥಳದಲ್ಲಿ 3 ವರ್ಷ ಸೇವಾವಧಿ ಪೂರ್ಣಗೊಳಿಸಿರಬೇಕು.

[ಇ] ಒಂದೇ ಕ್ಲಸ್ಟರ್ [ಸಮೂಹ] ವ್ಯಾಪ್ತಿಯಲ್ಲಿ ಪರಸ್ಪರ ವರ್ಗಾವಣೆ ಪ್ರಕರಣ ಬಯಸಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

[ಈ] ಪರಸ್ಪರ ವರ್ಗಾವಣೆ ಬಯಸುವ ಗ್ರೂಪ್-ಬಿ ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ಇವರಿಗೆ ಒಂದೇ ವರ್ಗಾವಣಾ ಅರ್ಜಿ ಇರುತ್ತದೆ. ಪರಸ್ಪರ ವರ್ಗಾವಣೆ ಬಯಸುವವರು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಅಂತರ್ಜಾಲದಲ್ಲಿ ಯಾರು ಕ್ರಮ ಸಂಖ್ಯೆ 1 ರಲ್ಲಿ ವೈಯಕ್ತಿಕ ಮಾಹಿತಿ ಭರ್ತಿ ಮಾಡಬೇಕೆಂದು ನಿರ್ಧರಿಸಿಕೊಂಡು ಅವರ ವೈಯಕ್ತಿಕ ಮಾಹಿತಿಯನ್ನು ಕ್ರಮ ಸಂಖ್ಯೆ-1 ರಲ್ಲಿ ಭರ್ತಿ ಮಾಡುವುದು. ತದ ನಂತರ ಕ್ರಮ ಸಂಖ್ಯೆ 1ರ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕ (ವೃತ್ತಿ ಶಿಕ್ಷಣ) ಅಧಿಕಾರಿಗಳ ಅರ್ಜಿ ಸಂಖ್ಯೆಯನ್ನೇ ಬಳಸಿಕೊಂಡು ಕ್ರಮ ಸಂಖ್ಯೆ 2ರಲ್ಲಿ ಸಂಬಂಧಿಸಿದ ಎರಡನೇ ಅಧಿಕಾರಿಗಳು ಅವರ ವೈಯಕ್ತಿಕ ಮಾಹಿತಿಯನ್ನು ಭರ್ತಿ ಮಾಡುವುದು. ಹೀಗೆ ಭರ್ತಿ ಮಾಡಿದ ಮಾಹಿತಿಯ ನಂತರ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ರವರ ಕಛೇರಿಗೆ ಖುದ್ದಾಗಿ ಭೇಟಿ ನೀಡಿ ಅರ್ಜಿಯ ಮಾಹಿತಿ ಸರಿಯಾಗಿರುವುದನ್ನು ಇಬ್ಬರು ಅರ್ಜಿದಾರರು ಖಚಿತಪಡಿಸಿಕೊಂಡು ಸ್ವೀಕೃತಿಯನ್ನು ಪಡೆಯುವುದು.

[ಉ] ಪರಸ್ಪರ ವರ್ಗಾವಣೆ ಬಯಸುವ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕ (ವೃತ್ತಿ ಶಿಕ್ಷಣ) ಗ್ರೂಪ್-ಬಿ ಅಧಿಕಾರಿಗಳು ಕೇವಲ ಒಬ್ಬರೊಂದಿಗೆ ಮಾತ್ರ ಪರಸ್ಪರ ವರ್ಗಾವಣಾ ಅರ್ಜಿ ಸಲ್ಲಿಸಬೇಕು. ಒಂದು ವೇಳೆ ಒಂದಕ್ಕಿಂತ ಹೆಚ್ಚು ಜನರೊಂದಿಗೆ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

[ಊ] ಅರ್ಜಿ ಸಲ್ಲಿಸಿದ 2 ದಿನಗಳ ಒಳಗಾಗಿ ಆಯಾಯಾ ಉಪನಿರ್ದೇಶಕರು(ಆಡಳಿತ)-ರವರ ಕಛೇರಿಗಳಿಗೆ ಸೇವಾ ಮಾಹಿತಿ ಪರಿಶೀಲನೆಗೆ ಖುದ್ದಾಗಿ ಕಡ್ಡಾಯವಾಗಿ ಹಾಜರಾಗತಕ್ಕದ್ದು.

(ಋ) ಪರಸ್ಪರ ವರ್ಗಾವಣೆ ಬಯಸುವ ಇಬ್ಬರೂ ಅಧಿಕಾರಿಗಳು ವರ್ಗಾವಣೆಗೆ ಅರ್ಜಿ ಸಲ್ಲಿಸಲು ನಿಗಧಿ ಪಡಿಸಿರುವ ಕೊನೆಯ ದಿನಾಂಕಕ್ಕೆ ಕನಿಷ್ಠ 3-ವರ್ಷಗಳ ಸೇವೆಯನ್ನು ಒಂದೇ ಸ್ಥಳದಲ್ಲಿ ಪೂರ್ಣಗೊಳಿಸಿರಬೇಕು ಮತ್ತು ನಿವೃತ್ತಿ ಹೊಂದಲು ಕನಿಷ್ಠ-3 ವರ್ಷಕ್ಕಿಂತ ಹೆಚ್ಚಿನ ಸೇವೆ ಹೊಂದಿರಬೇಕು.

(ಎ) ಪರಸ್ಪರ ವರ್ಗಾವಣೆಯು ಸೇವಾವಧಿಯಲ್ಲಿ ಒಂದಕ್ಕಿಂತ ಹೆಚ್ಚುಬಾರಿಗೆ ಅವಕಾಶವಿರುವುದಿಲ್ಲ. ಹಾಗೂ ಜೇಷ್ಠತೆಯ ರಕ್ಷಣೆಗೆ ಅರ್ಹರಾಗಿರುವುದಿಲ್ಲ.

(ಏ) ಪರಸ್ಪರ ವರ್ಗಾವಣೆ ಬಯಸುವ ಇಬ್ಬರೂ ಗ್ರೂಪ್-ಬಿ ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕ(ವೃತ್ತಿ ಶಿಕ್ಷಣ) ಇವರುಗಳು ನಿಗಧಿತ ದಿನಾಂಕದಂದು ವರ್ಗಾವಣೆ ಅರ್ಜಿಯ ಕ್ರಮ ಸಂಖ್ಯೆ (1)ರ ಅಧಿಕಾರಿಗಳು ಪ್ರಾಧಿಕಾರದ ಬಳಿ ಇಬ್ಬರೂ ಕೌನ್ಸಿಲಿಂಗ್‌ಗೆ ಹಾಜರಾಗತಕ್ಕದ್ದು.

4. **ಘಟಕದೊಳಗೆ ಕೋರಿಕೆ ವರ್ಗಾವಣೆಗೆ ಆದ್ಯತೆ ಬಯಸಿ ಅರ್ಜಿ ಸಲ್ಲಿಸುವ ಬಗ್ಗೆ**- ಆದ್ಯತೆ ಬಯಸಿ ಅರ್ಜಿ ಸಲ್ಲಿಸುವವರು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007,ರ

ಮೇಲಿನ 'ಅ', 'ಆ', 'ಇ', 'ಈ', 'ಉ' ಮತ್ತು 'ಋ' ಪ್ರಕರಣಗಳಲ್ಲಿ ಆದ್ಯತೆ ಬಯಸುವ ಅಧಿಕಾರಿಗಳು ಆದ್ಯತೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಅರ್ಜಿ ಪರಿಶೀಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದು ಉಪನಿರ್ದೇಶಕರು(ಆಡಳಿತ)-ರವರಿಗೆ ಹಾಜರುಪಡಿಸತಕ್ಕದ್ದು.

5. **ಖಾಯಂ ಪೂರ್ವ ಸೇವಾ ಅವಧಿ:-** ಖಾಯಂ ಪೂರ್ವ ಸೇವಾ ಅವಧಿ ಪೂರೈಸದ ಪ್ರಸ್ತಾಪಿತ ಅಧಿಕಾರಿಗಳು ಯಾವುದೇ ತರಹದ (ಕೋರಿಕೆ, ಪರಸ್ಪರ) ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
6. **ಮೂರು ವರ್ಷಗಳ ಅವಧಿಯವರೆಗೆ 11ನೇ ನಿಯಮದಡಿಯಲ್ಲಿ ಕೌನ್ಸಿಲಿಂಗ್‌ಗೆ ಅರ್ಹರಾಗಿರತಕ್ಕದ್ದಲ್ಲ:-** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ರ 15ನೇ ನಿಯಮದಡಿಯಲ್ಲಿ ಬಿಡುಗಡೆಯಾದಂತಹ ಅರ್ಜಿದಾರರು, ಮುಂದಿನ ಮೂರು ವರ್ಷಗಳ ಅವಧಿಯವರೆಗೆ ವರ್ಗಾವಣೆಗೆ ಸಂಬಂಧಿಸಿದಂತೆ 11ನೇ ನಿಯಮದಡಿಯಲ್ಲಿ ಕೌನ್ಸಿಲಿಂಗ್‌ಗೆ ಅರ್ಹರಾಗಿರತಕ್ಕದ್ದಲ್ಲ.
7. **ಇಲಾಖಾ ವೆಬ್ ಸೈಟ್‌ನಲ್ಲಿ ಮಾಹಿತಿ:-** ವರ್ಗಾವಣಾ ವೇಳಾ ಪಟ್ಟಿಯಂತೆ ನಿಗದಿತ ಅವಧಿಯಲ್ಲಿ ಎಲ್ಲಾ ಕಾರ್ಯಗಳನ್ನು ನಿಯಮಾನುಸಾರ ನಡೆಸಬೇಕಾಗಿದ್ದು, ವರ್ಗಾವಣೆ ಬಗ್ಗೆ ಕಾಲಕಾಲಕ್ಕೆ ಹೆಚ್ಚಿನ ಮಾಹಿತಿ ಇತ್ಯಾದಿ ವಿಷಯದ ಬಗ್ಗೆ ಅಧಿಸೂಚನೆ : ಆದೇಶ : ಸುತ್ತೋಲೆಗಳನ್ನು ಹೊರಡಿಸಿದಲ್ಲಿ ಈ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಪ್ರತಿದಿನ ಇಲಾಖಾ **Web Site** ನೋಡಿ ಮಾಹಿತಿ ಪಡೆದುಕೊಳ್ಳಲು ತಿಳಿಸಿದೆ.
8. ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳು:- ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅದನ್ನು ಸಮರ್ಥಿಸುವ ದಾಖಲೆಗಳೊಂದಿಗೆ ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಸಲ್ಲಿಸತಕ್ಕದ್ದು.

**ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆಗಳು**

1. **ವರ್ಗಾವಣಾ ಅರ್ಜಿಗಳ ಪರಿಶೀಲನೆ:-** ಪ್ರಸ್ತಾಪಿತ ಅಧಿಕಾರಿಗಳು ಅಂತರ್ಜಾಲದ **[On Line]** ಮೂಲಕ ಸಲ್ಲಿಸಿದ ವರ್ಗಾವಣೆ ಅರ್ಜಿಗಳಲ್ಲಿನ ಸೇವಾ ವಿವರಗಳು [ಹೆಸರು, ಜನ್ಮ ದಿನಾಂಕ, ಪದನಾಮ, ಶಾಲಾ, ಕಾಲೇಜು, ಕಚೇರಿ ವಿಳಾಸ, ಪ್ರಸ್ತುತ ವೃಂದದಲ್ಲಿ ಸಲ್ಲಿಸಿರುವ ಸೇವಾ ವಿವರ, ಬಯಸಿರುವ ಆದ್ಯತೆ, ಇತ್ಯಾದಿ] ಸರಿಯಿದೆಯೇ ಎಂಬುದನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ನಿಯಮನುಸಾರ ಪರಿಶೀಲಿಸತಕ್ಕದ್ದು ಮತ್ತು ಅಭ್ಯರ್ಥಿ ಸಮ್ಮುಖದಲ್ಲಿ ಪ್ರಮಾಣೀಕರಿಸತಕ್ಕದ್ದು.

2. **ಪರಸ್ಪರ ವರ್ಗಾವಣೆಗೆ ಅರ್ಜಿಗಳ ಪರಿಶೀಲನೆ:-** ಪರಸ್ಪರ ವರ್ಗಾವಣೆಗೆ ಸಲ್ಲಿಸಿರುವ ಒಂದೇ ಅರ್ಜಿಯನ್ನು ಅಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು, ಅಧಿಕಾರಿ-1 ಮತ್ತು ಅಧಿಕಾರಿ-2ರ ಮಾಹಿತಿ ಸರಿ ಇದೆ ಎಂಬುದನ್ನು ಪರಿಶೀಲಿಸಿ ಸರಿ ಇದ್ದಲ್ಲಿ ಅನುಮೋದನೆ ನೀಡತಕ್ಕದ್ದು. ಇಬ್ಬರು ಅಧಿಕಾರಿಗಳು ಒಂದೇ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ ಅಧಿಕಾರಿ-1ರ ಮಾಹಿತಿ ಸರಿ ಇದೆ ಎಂಬುದನ್ನು ಪರಿಶೀಲಿಸಿ ಅನುಮೋದನೆ ನೀಡತಕ್ಕದ್ದು. ಮತ್ತು ಅಧಿಕಾರಿ-2ರ ಮಾಹಿತಿ ಸರಿ ಇದೆ ಎಂಬುದನ್ನು ಸಹ ಪರಿಶೀಲಿಸಿ ಅನುಮೋದನೆ ನೀಡತಕ್ಕದ್ದು. ಒಂದೇ ಕ್ಲಸ್ಟರ್ (ಸಮೂಹ) ವ್ಯಾಪ್ತಿಯಲ್ಲಿ ಪರಸ್ಪರ ವರ್ಗಾವಣೆ ಪ್ರಕರಣಗಳನ್ನು ಪರಿಗಣಿಸತಕ್ಕದ್ದಲ್ಲ.

3. **ಆಯಾ ವೃಂದದಲ್ಲಿ ಸಲ್ಲಿಸಿದ ಸೇವೆಯ ವೆಯಿಟೇಜ್ ಬಗ್ಗೆ ಪರಿಶೀಲನೆ:-** ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿನಾಂಕ: 14.11.2007 ರಲ್ಲಿ ಅಧಿಸೂಚಿಸಲಾಗಿರುವ ಅನುಸಾರ ಎ, ಬಿ, ಸಿ ವಲಯಗಳ ಪ್ರಕಾರ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 37 ಇಟಿಆರ್ 2009, ದಿನಾಂಕ: 23.04.2011ರಲ್ಲಿ ನಿಯಮ 7 (2)ಕ್ಕೆ ಪ್ರತಿಯೋಜಿಸಿರುವಂತೆ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಇವರುಗಳ ವೃಂದಕ್ಕೆ ಬಂದ ದಿನಾಂಕದ ನಂತರ ಕರ್ತವ್ಯ ನಿರ್ವಹಿಸಿದ ಎಲ್ಲಾ ಸ್ಥಳಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಅರ್ಜಿ ಸಲ್ಲಿಸುವ ದಿನಾಂಕದವರೆಗೆ ಸರಿಯಾಗಿ ದಾಖಲು ಮಾಡಿದ್ದಾರೆಯೆ ಎಂಬ ಬಗ್ಗೆಯೂ ಸಹ ಜಿಲ್ಲಾ ಉಪನಿರ್ದೇಶಕರು [ಆಡಳಿತ] ರವರು On Line ನಲ್ಲಿ ಪರಿಶೀಲಿಸಿ ಪ್ರಮಾಣೀಕರಿಸತಕ್ಕದ್ದು.

**ಉದಾ:** ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಈ ವೃಂದಕ್ಕೆ ಬಡ್ತಿ ಹೊಂದಿದ ದಿನಾಂಕದಿಂದ ಮಾತ್ರ weight age (ವೆಯಿಟೇಜ್) ಅಂಕಗಳನ್ನು ಪರಿಗಣಿಸಿ ಸಿದ್ಧಪಡಿಸುವುದು.

ಪತ್ರಗಳನ್ನು ಪರಿಶೀಲನೆಗೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ನೀಡತಕ್ಕದು. ಆದ್ಯತಾ ಪ್ರಕರಣಗಳ ವಿವರ ಈ ಕೆಳಗಿನಂತಿರುತ್ತದೆ.

[ಅ] **ಅತ್ಯಂತ ತೀವ್ರ ಖಾಯಿಲೆಯ ಪ್ರಕರಣಗಳು:-** ಅತ್ಯಂತ ತೀವ್ರತರವಾದ ಕಾಯಿಲೆಯ ಪ್ರಕರಣಗಳಲ್ಲಿ ಅಧಿನಿಯಮದ 6 [2] [4] ರಲ್ಲಿ ಸೂಚಿಸಿದಂತೆ ಅಧಿಕಾರಿಗಳು ಅಥವಾ ಅವರ / ಅವಳ ಗಂಡ / ಹೆಂಡತಿ ಅಥವಾ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ನಿಯಮಾನುಸಾರ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು. ಕಿಡ್ನಿ, ಹೃದಯ ಸಂಬಂಧಿ, ಕ್ಯಾನ್ಸರ್ ಮತ್ತು ಹೆಚ್.ಐ.ವಿ ಖಾಯಿಲೆಗಳಿಂದ ನರಳುತ್ತಿರುವವರಿಗೆ ಮಾತ್ರ ಈ ಪ್ರಕರಣದಡಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೆ ಶಿಸ್ತಿನ ಕ್ರಮ ಜರುಗಿಸಲಾಗುವುದು. ಪತಿ ಪತ್ನಿ ಇಬ್ಬರೂ ಯಾರಾದರೂ ಒಬ್ಬರು ಮಾತ್ರ ಈ ಆದ್ಯತೆಯಡಿ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ.

[ಆ] **ದೈಹಿಕ ಅಂಗವಿಕಲ ಪ್ರಕರಣಗಳು:-** ದೈಹಿಕ ಅಂಗವಿಕಲ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಶಸ್ತ್ರ ವೈದ್ಯರಿಂದ ಪ್ರಮಾಣೀಕರಿಸಲಾದಂತೆ ಶೇ.40% ಕ್ಕಿಂತ ಹೆಚ್ಚಿನ ಅಂಗವಿಕಲತೆ ಇರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು. ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೆ ಶಿಸ್ತಿನ ಕ್ರಮ ಜರುಗಿಸಲಾಗುವುದು.

[ಇ] **ವಿಧವೆ ಅಧಿಕಾರಿಗಳ ಪ್ರಕರಣಗಳು:-** ಪತಿಯ ಮರಣ ಪ್ರಮಾಣ ಪತ್ರ ಅಥವಾ ಇತರೆ ಯಾವುದಾದರು ಒಂದು ಅರ್ಹ ದಾಖಲೆಯನ್ನು ಹಾಜರುಪಡಿಸುವುದು.

[ಈ] **ಸೈನಿಕ ಪ್ರಕರಣಗಳು:-** ಭಾರತೀಯ ರಕ್ಷಣಾ ಪಡೆ/ಅರೆ ಮಿಲಿಟರಿ ಪಡೆಗಳಲ್ಲಿ (ಕೇಂದ್ರ ಗೃಹ ಸಚಿವಾಲಯ) ಕರೆಯುವ ಯಾವುದೇ ಹೆಸರಿನ ಸೈನಿಕರು) ಕಾರ್ಯನಿರ್ವಹಿಸುತ್ತಿರುವ/ಮೃತರಾಗಿರುವ ಅವಲಂಬಿತರಿಗೆ ಒಂದು ಸಲದ ಕ್ರಮವಾಗಿ/ನಿವೃತ್ತರಾಗಿರುವ ಅವಲಂಬಿತರಿಗೆ ಒಂದು ಸಲದ ಕ್ರಮವಾಗಿ/ಶಾಶ್ವತ ಅಂಗವಿಕಲ ಸೈನಿಕರ ಪತಿ ಅಥವಾ ಪತ್ನಿ ರವರು, ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.

[ಉ] **ವಿವಾಹಿತ ಅಧಿಕಾರಿಗಳ ಪ್ರಕರಣ:-** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ರ ನಿಯಮ 7 (1) (ಡಿ) ರಲ್ಲಿ ತಿಳಿಸಿರುವಂತೆ ಅಧಿನಿಯಮದ 6ನೇ ಪ್ರಕರಣದ (2) ಉಪ ಪ್ರಕರಣದ (1)ನೇ ಖಂಡದ ಪ್ರಕಾರ ಅಗತ್ಯ ಪ್ರಮಾಣ ಪತ್ರ ಸಲ್ಲಿಸಿ ವಿವಾಹಿತ ಅಧಿಕಾರಿಗಳ ಪ್ರಕರಣದಡಿ ಆದ್ಯತೆ ಕೋರತಕ್ಕದ್ದು. ಗಂಡ ಹೆಂಡತಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ದೈಹಿಕ ಶಿಕ್ಷಣ ಪರಿವೀಕ್ಷಕರು, ಮತ್ತು ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಇವರುಗಳು ಪ್ರಸ್ತುತ ಇರುವ ಜೇಷ್ಠತಾ ಘಟಕದಲ್ಲಿ ಕನಿಷ್ಠ 3 ವರ್ಷಗಳ ಸೇವೆಯನ್ನು ಸಲ್ಲಿಸಿದಲ್ಲಿ ಮಾತ್ರ ಕೌನ್ಸಿಲಿಂಗ್ ಮೂಲಕ ಆತನ/ಆಕೆಯ ಹೆಂಡತಿ/ಗಂಡ ಸೇವೆ ಸಲ್ಲಿಸಿರುತ್ತಿರುವ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಕ್ಕೆ ಸ್ಪಷ್ಟ ಖಾಲಿ ಸ್ಥಳದ ಲಭ್ಯತೆಯ ಆಧಾರದ ಮೇಲೆ ಸೇವಾವಧಿಯಲ್ಲಿ 2 ಭಾರಿಗಿಂತ ಹೆಚ್ಚಿಲ್ಲದೆ ವರ್ಗಾವಣೆ ಮಾಡಲು ಅವಕಾಸವಿದೆ.

**[i]ಪತಿ ಅಥವಾ ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿರುವ ಪ್ರಕರಣಗಳು:-**

[iಎ] ಪತಿ ಅಥವಾ ಪತ್ನಿ, ಇಬ್ಬರಲ್ಲಿ ಒಬ್ಬರು ಸರ್ಕಾರಿ ನೌಕರರಾಗಿದ್ದು, ಮತ್ತೊಬ್ಬರು ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತೊರುವ ಪ್ರಕರಣಗಳು( ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅನುದಾನಿತ ಸಂಸ್ಥೆಯ ನೌಕರರು ಎಂದರೆ ಸರ್ಕಾರದ ಅನುದಾನಿತ ಶೈಕ್ಷಣಿಕ ಸಂಸ್ಥೆಯು ಅನುದಾನಕ್ಕೊಳಪಟ್ಟ ಖಾಯಂ ಸಂಸ್ಥೆಯ ನೌಕರರು ಎಂಬುದಾಗಿ ತಿಳಿಯತಕ್ಕದ್ದು. ಮತ್ತು ಈ ಕುರಿತು ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು). (ಈ ಆದ್ಯತೆಯು ಕೇವಲ ಘಟಕದ ಹೊರಗಿನ ವರ್ಗಾವಣೆ ಕೋರಿಕೆಗೆ ಅನ್ವಯವಾಗುತ್ತದೆ). ಈ ಆದ್ಯತೆಯ ಶಿಕ್ಷಕರನ್ನು, ಆತನ/ಆಕೆಯ ಕೋರಿಕೆಯ ಮೇರೆಗೆ, ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಜೇಷ್ಠತೆ ಘಟಕದ ಹೊರಗೆ ಅವರ ಪತಿ/ಪತ್ನಿ ಕರ್ತವ್ಯ ನಿರ್ವಹಿಸುತ್ತಿರುವ **ಅನುದಾನಿತ ಶೈಕ್ಷಣಿಕ ಅಂತಹ ಸ್ಥಳ ಅಥವಾ ಹತ್ತಿರದ ಸ್ಥಳ ಅಥವಾ ಹುದ್ದೆಗೆ ವರ್ಗಾಯಿಸಬಹುದು).**

(ಊ) **ಮನ್ನಣೆ ಪಡೆದ ರಾಜ್ಯ ಸರ್ಕಾರಿ ನೌಕರರ ಸಂಸ್ಥೆಗಳ ಚುನಾಯಿತ ಪದಾಧಿಕಾರಿಗಳು:-** ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಕರ್ನಾಟಕ ರಾಜ್ಯ ಸರ್ಕಾರಿ ಶಿಕ್ಷಕರ ಸಂಘ ಅಥವಾ ಕರ್ನಾಟಕ ಸರ್ಕಾರಿ ನೌಕರರ ಸಂಘದ ಚುನಾಯಿತ ಪದಾಧಿಕಾರಿಯಾಗಿದ್ದಲ್ಲಿ ಸಂಘದವರಿಂದ ಪ್ರಮಾಣೀಕರಿಸಿರುವ ಪ್ರಮಾಣ ಪತ್ರಗಳನ್ನು ಪಡೆದು. ಹಾಜರುಪಡಿಸುವುದು. ನಾಮನಿರ್ದೇಶನ ಮಾಡಿಕೊಂಡ ಪದಾಧಿಕಾರಿಗಳು ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

[ಎ] **ಇತರೆ ಅಧಿಕಾರಿಗಳು:-**

**ಉದಾ:** ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಈ ವೃಂದಕ್ಕೆ ಬಡ್ತಿ ಹೊಂದಿದ ದಿನಾಂಕದಿಂದ ಮಾತ್ರ weight age (ವೆಯೆಟೇಜ್) ಅಂಕಗಳನ್ನು ಪರಿಗಣಿಸಿ ಸಿದ್ಧಪಡಿಸುವುದು.

4. **ವರ್ಗಾವಣೆ ಅರ್ಜಿಗಳ ಅನುಮೋದನೆ:-** ಇಲಾಖೆಯ On Line ನಲ್ಲಿ ದಾಖಲಾದ ಅರ್ಜಿಗಳನ್ನು ಪ್ರತಿದಿನ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ರವರು **Login ID** ಹಾಗೂ **password** ನ್ನು ಉಪಯೋಗಿಸಿಕೊಂಡು Sanctioned **Post details, vacancy** ಹಾಗೂ working strength ನ ಮಾಹಿತಿಗಳನ್ನು ಭರ್ತಿ ಮಾಡುವುದು. ಅವರಿಗೆ ನೀಡಿದ user ID ಮತ್ತು password ಗಳನ್ನು ಉಪಯೋಗಿಸಿ On Line ಗೆ ಪ್ರವೇಶ ಪಡೆದು ಅರ್ಜಿ ಸಲ್ಲಿಸಿರುವವರ ಸಮ್ಮುಖದಲ್ಲಿ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಬೇಕು. ಮಾಹಿತಿಗಳು ಸರಿ ಇವೆ ಎಂದು ಖಚಿತವಾದ ನಂತರ ಅಥವಾ ತಿದ್ದುಪಡಿ ಮಾಡಿದ ನಂತರ ಅರ್ಜಿಯನ್ನು ಅನುಮೋದಿಸಿ, ಅನುಮೋದಿತ ಅರ್ಜಿಯ ಪ್ರತಿಯನ್ನು ಮುದ್ರಿಸಿ ಸಹಿ ಮತ್ತು ಸೀಲು ಹಾಕಿ ದೃಢೀಕರಿಸಿ ಒಂದು ಪ್ರತಿಯನ್ನು ಉಪನಿರ್ದೇಶಕರ ಕಛೇರಿಯಲ್ಲಿ ರಕ್ಷಾ ಕಡತದಲ್ಲಿಡುವುದು. (ಆದ್ಯತೆಗೆ ಸಂಬಂಧಿಸಿದ ದಾಖಲೆಗಳ ಫೋಟೊ ಪ್ರತಿಯೊಂದಿಗೆ) ಹಾಗೂ ಅರ್ಜಿದಾರರಿಗೆ ಒಂದು ಪ್ರತಿಯನ್ನು ದೃಢೀಕರಿಸಿ ನೀಡುವುದು.

5. **ಆದ್ಯತಾ ಪ್ರಮಾಣ ಪತ್ರಗಳ ಪರಿಶೀಲನೆ:-** ಆದ್ಯತೆ ಬಯಸಿ ಅರ್ಜಿ ಸಲ್ಲಿಸಿರುವ ಅಧಿಕಾರಿಗಳ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರ ನೀಡಿರುವ ಮೂಲ ಪ್ರಮಾಣ ಪತ್ರಗಳೊಂದಿಗೆ ಪರಿಶೀಲಿಸಿ ಆದ್ಯತೆಗೆ ಅರ್ಹವಿದ್ದಲ್ಲಿ ಮಾತ್ರ ಆದ್ಯತೆಗೆ ಪರಿಗಣಿಸತಕ್ಕದ್ದು. ಇಲ್ಲವಾದಲ್ಲಿ ಇತರೆ ಶಿಕ್ಷಕಿ, ಅಥವಾ ಇತರೆ ಶಿಕ್ಷಕರ ಪ್ರಕರಣಗಳಲ್ಲಿ ಪರಿಗಣಿಸತಕ್ಕದ್ದು.

6. **ಅರ್ಜಿ ಹಾಗೂ ಆದ್ಯತಾ ಪ್ರಮಾಣ ಪತ್ರಗಳನ್ನು ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವುದು:-**ಉಪನಿರ್ದೇಶಕರು [ಆಡಳಿತ] ಅಭ್ಯರ್ಥಿಗಳ ಅರ್ಜಿ ಮತ್ತು ಆದ್ಯತೆಯ ಮೂಲ ಪ್ರಮಾಣ ಪತ್ರಗಳನ್ನು ಕ್ರೂಢೀಕರಿಸಿ ಕ್ರೂಢೀಕೃತ ಪಟ್ಟಿಯೊಂದಿಗೆ ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

7. **ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳು:-** ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಬಂದಲ್ಲಿ ಸಮರ್ಥಿಸುವ ದಾಖಲೆಗಳೊಂದಿಗೆ ಪರಿಶೀಲಿಸಿ ಕ್ರೂಢೀಕೃತ ಮಾಹಿತಿಯನ್ನು ಸೂಕ್ತ ಷರಾ ಹಾಗೂ ದಾಖಲೆಗಳೊಂದಿಗೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ವರ್ಗಾವಣಾ ಪ್ರಾಧಿಕಾರಕ್ಕೆ ನಿಗಧಿತ ದಿನಾಂಕದಂದು ಮುದ್ದಾಂ ಸಲ್ಲಿಸತಕ್ಕದ್ದು. ಯಾವುದೇ ಆಕ್ಷೇಪಣೆಗಳು ಇಲ್ಲದಿದ್ದಲ್ಲಿ ಶೂನ್ಯ ವರದಿಯನ್ನು ಸಲ್ಲಿಸತಕ್ಕದ್ದು.

8. **ಹಿಂದಿನ ವರ್ಷಗಳಲ್ಲಿ ವರ್ಗಾವಣೆ ಆದೇಶ ಪಡೆದು ಕಛೇರಿಯ ಕರ್ತವ್ಯದಿಂದ ಬಿಡುಗಡೆ ಹೊಂದದೇ ಇದ್ದಲ್ಲಿ ಅಂತಹ ಅಧಿಕಾರಿಗಳ ಅರ್ಜಿಗಳನ್ನು ಈ ಸಾಲಿನಲ್ಲಿ ಪರಿಗಣಿಸಬಾರದು.**

9. **ಸಹಾಯವಾಣಿ:-** ಪ್ರಸಕ್ತ ಸಾಲಿನ ವರ್ಗಾವಣೆಗೆ ಸಂಬಂಧಿಸಿದಂತೆ, ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಲು ಉಪನಿರ್ದೇಶಕರ ಕಛೇರಿಗಳಲ್ಲಿ ಹಾಗು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಸಹಾಯವಾಣಿಯನ್ನು ಸ್ಥಾಪಿಸುವುದು ಹಾಗು ಸಹಾಯವಾಣಿಯಲ್ಲಿ ವಿಷಯವನ್ನರಿತ ಜವಾಬ್ದಾರಿಯುತ ಅಧಿಕಾರಿಗಳು ಮತ್ತು ನೌಕರರನ್ನು ನೇಮಿಸುವುದು.

**10.ಪ್ರಚಾರ:-** ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ಇವರು On Line ನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ರವರ ಕಛೇರಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು. ಅಲ್ಲದೆ, ಸ್ಥಳೀಯ ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ಉಚಿತವಾಗಿ ಪ್ರಕಟಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದು.

**ಇಲಾಖಾ ವೆಬ್ ಸೈಟ್‌ನಲ್ಲಿ ಮಾಹಿತಿ:-** ವರ್ಗಾವಣಾ ವೇಳಾ ಪಟ್ಟಿಯಂತೆ ನಿಗದಿತ ಅವಧಿಯಲ್ಲಿ ಎಲ್ಲಾ ಕಾರ್ಯಗಳನ್ನು ನಿಯಮಾನುಸಾರ ನಡೆಸಬೇಕಾಗಿದ್ದು, ವರ್ಗಾವಣೆ ಬಗ್ಗೆ ಕಾಲಕಾಲಕ್ಕೆ ಹೆಚ್ಚಿನ ಮಾಹಿತಿ ಇತ್ಯಾದಿ ವಿಷಯದ ಬಗ್ಗೆ ಅಧಿಸೂಚನೆ : ಆದೇಶ : ಸುತ್ತೋಲೆಗಳನ್ನು ಹೊರಡಿಸಿದಲ್ಲಿ ಈ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಪ್ರತಿದಿನ ಇಲಾಖಾ **Web Site** www.schooleducation.kar.nic.in ನೋಡಿ ಮಾಹಿತಿ ಪಡೆದುಕೊಳ್ಳಲು ತಿಳಿಸಿದೆ.

11 **ಅಧಿಕಾರಿಗಳ ಕರ್ತವ್ಯಗಳು:-** ಸರ್ಕಾರದ ಆದೇಶ ಮತ್ತು ನಿಯಮಗಳು ಹಾಗೂ ವೇಳಾಪಟ್ಟಿಯಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಸಂಬಂಧಿಸಿದ ಅಧಿಕಾರಿಗಳು ಕರ್ತವ್ಯಗಳನ್ನು ನಿರ್ವಹಿಸಲು ತಿಳಿಸಿದೆ.

12 **ಸಕ್ಷಮ ಪ್ರಾಧಿಕಾರದ ಕರ್ತವ್ಯಗಳು:-** ಉಲ್ಲೇಖಿತ ಸರ್ಕಾರದ ಆದೇಶಗಳನ್ವಯ ಹಾಗೂ ವೇಳಾಪಟ್ಟಿಯ ಪ್ರಕಾರ 2016-17ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ವೃಂದದ ಅಧಿಕಾರಿಗಳ ವರ್ಗಾವಣೆಗಳನ್ನು ಸಕ್ಷಮ ಪ್ರಾಧಿಕಾರಿಗಳು ಅವರವರ ಆಡಳಿತ ವ್ಯಾಪ್ತಿಯಲ್ಲಿ ಮಾಡಲು ಅಪರ ಆಯುಕ್ತರು ಕಲಬುರಗಿ ಮತ್ತು ಅಪರ ಆಯುಕ್ತರು, ಧಾರವಾಡ ರವರು ಕ್ರಮ ವಹಿಸುವಂತೆ ತಿಳಿಸಿದೆ.

13 **ಖಾಲಿ ಹುದ್ದೆಗಳು:-** ವೇಳಾ ಪಟ್ಟಿಯ ಪ್ರಕಾರ ನಿಗಧಿಪಡಿಸಿರುವ ದಿನಾಂಕದ ಒಳಗಾಗಿ, ಆ ದಿನಾಂಕಕ್ಕೆ ಲಭ್ಯವಾಗುವ ಖಾಲಿ ಹುದ್ದೆಗಳ ಮಾಹಿತಿಯನ್ನು ಇಲಾಖಾ ತಂತ್ರಾಂಶದಲ್ಲಿ ಆಯಾಯಾ ಉಪನಿರ್ದೇಶಕರು/ಕೇಂದ್ರ ಕಛೇರಿಯ ಮುಖ್ಯಸ್ಥರು ಭರ್ತಿ ಮಾಡಲು ತಿಳಿಸಿದೆ.

14. ಖಾಲಿ ಹುದ್ದೆಗಳ ಮಾಹಿತಿಯನ್ನು ನಿಗಧಿಪಡಿಸಿದ ದಿನಾಂಕಕ್ಕೆ ತಕ್ಕಂತೆ ತಂತಂತ್ರಾಂಶದಲ್ಲಿ ಭರ್ತಿ ಮಾಡಿದ ನಂತರ ಪದೇ ಪದೇ ತಿದ್ದುಪಡಿ/ಬದಲಾವಣೆಗಾಗಲೀ ಈ ಕುರಿತು ಈ ಕಛೇರಿಗೆ ಪತ್ರ ವ್ಯವಹಾರ ಮಾಡುವುದು ಕಂಡುಬಂದಲ್ಲಿ ಜಿಲ್ಲಾ ಉಪನಿರ್ದೇಶಕರು (ಆಡಳಿತ)-ರವರನ್ನು ನೇರ ಹೊಣೆಗಾರರನ್ನಾಗಿ ಮಾಡಿ ನಿಯಮಾನುಸಾರ ಶಿಸ್ತುಕ್ರಮ. ಕೈಗೊಳ್ಳಲಾಗುವುದು.

**(ಕರಡು ಪ್ರತಿ)**

[ಡಾ॥ ಎಂ.ಟಿ.ರೇಜು]
ಆಯುಕ್ತರು.

**ಇವರಿಗೆ,**

ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ

**ಪ್ರತಿಯನ್ನು:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ
7. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
8. ಸಹ ನಿರ್ದೇಶಕರು-1 ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು
11. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಸಾ.ಶಿ.ಇಲಾಖೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
12. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
13. ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ
14. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
15. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ.
16. ಕಛೇರಿ ಪ್ರತಿ.